# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

**Superintending Engineer(Ele)**
**O & M Circle, Keshwapur, Hubballi-23**
**E-mail ID: seehbl.hescom@gmail.com**

Corporate Identity Number (CIN) : U31401KA2002SGC030437


## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:248/2020**

**ವೇದಿಕೆಯ ಸದಸ್ಯರು:**

ಶ್ರೀ **ಎಮ್. ಆರ್. ಶಾನಭಾಗ,** ಅಧೀಕ್ಷಕ ಇಂಜಿನೀಯರ(ವಿ) ಕಾ ಮತ್ತು ಪಾ ವೃತ್ತ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ರಾಮಪ್ಪ. ಎನ್. ಎನ್,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.

ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು. **Leave of absence.**

**ಶ್ರೀ ಸಂತೋಷ ಪಿ ಹನ್ನಿಕೇರಿ,**
(R R No : 69920C)
ಮನೆ ನಂ-779 ಪದ್ಮಾವತಿ ನಿಲಯ,
ವನಶ್ರೀ ನಗರ ಸತ್ತೂರ ಧಾರವಾಡ. .............ದೂರುದಾರರು.

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಶಹರ ಉಪವಿಭಾಗ-1,
ಹೆಸ್ಕಾಂ, ಧಾರವಾಡ. .................ಪ್ರತಿವಾದಿಗಳು.

**ಪೀಠಿಕೆ:**

1. ಶ್ರೀ ಸಂತೋಷ ಪಿ ಹನ್ನಿಕೇರಿ, ಇವರ ಸ್ಥಾವರ ಸಂಖ್ಯೆ: 69920c ನೇದ್ದ ಸ್ಥಾವರವು 0.480 ಕಿಲೋ ವ್ಯಾಟ್ ವಿದ್ಯುತ್ ಮಂಜೂರಾತಿಯೊಂದಿಗೆ ಎಲ್.ಟಿ-3 ಜಕಾತಿಯಡಿಯಲ್ಲಿ ದಿನಾಂಕ:30-03-2007 ರಂದು ಸಂಪರ್ಕಿತಗೊಂಡಿರುತ್ತದೆ. ಸದರಿ ಗ್ರಾಹಕರ ವಾಸದ ಮನೆಯ ಜೊತೆಗೆ ಒಂದು ಚಿಕ್ಕ ಅಂಗಡಿಯನ್ನು ಬಾಡಿಗೆಗೆ ಕೊಟ್ಟಿದ್ದು, ಸದರಿ ಅಂಗಡಿಯ ಬಿಲ್ಲು ಇಲ್ಲಿವರೆಗೆ ಅಂದರೆ ಜೂನ್-2019 ರಲ್ಲಿ ಹಳೆಯ ವಿದ್ಯುತ್ ಮೀಟರನ್ನು ತೆಗೆದು ಹೊಸ ಮೀಟರ್‌ನ್ನು ಹೆಸ್ಕಾಂ, ಅವರು ಅಳವಡಿಸಿ ಹೋಗಿರುತ್ತಾರೆ. ತದನಂತರ ಮೀಟರ್ ಬದಲಾಯಿಸುವಕ್ಕಿಂತ ಪೂರ್ವದಲ್ಲಿ ವಿದ್ಯುತ್ ಬಿಲ್ 250 ರಿಂದ 300/- ತಿಂಗಳಿಗೆ ಬರುತ್ತಿದ್ದು, ಹೊಸ ಮೀಟರ್ ಅಳವಡಿಕೆಯಿಂದಾಗಿ ವಿದ್ಯುತ್ ಬಿಲ್ 1680/- ಹಾಗೂ ಅಗಷ್ಟ, ಸಪ್ಟಂಬರ್ ಬಿಲ್ ರೂ. 19000/-ಗಳವರೆಗೆ ಬಂದಿರುತ್ತದೆ. ಆದ್ದರಿಂದ ಸದರಿ ಮೊತ್ತವನ್ನು ಕೈ ಬಿಡುವಂತೆ ಕೋರಿ ಗ್ರಾಹಕರು ದಿನಾಂಕ:22-01-2020 ರಂದು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕಗೆ ದೂರು ಸಲ್ಲಿಸಿರುತ್ತಾರೆ.

2. ಸ್ಥಾವರ ಸಂಖ್ಯೆ: 69920ಸಿ ಶ್ರೀ ಸಂತೋಷ ಪಿ ಹನ್ನಿಕೇರಿ ನಂ-779 'ಪದ್ಮಾವತಿ ನಿಲಯ' ವನಶ್ರೀ ನಗರ ಸತ್ತೂರ ಧಾರವಾಡ, ಸ್ಥಾವರವು ಎಲ್.ಟಿ-3 ಜಕಾತಿ ಅಡಿಯಲ್ಲಿ 0.480 ಕಿಲೋ ವ್ಯಾಟ್ ಭಾರಕ್ಕಾಗಿ ಮಂಜೂರಾತಿ ಪಡೆದಿದ್ದು ದಿನಾಂಕ:30-03-2007 ರಂದು ಸಂಪರ್ಕಗೊಂಡಿರುತ್ತದೆ. ಆವರಣದಲ್ಲಿ ಗ್ರಾಹಕರು ವಿದ್ಯುತ್ ಉಪಕರಣಗಳಾದ ಫ್ರೀಜ್ (Ice Cream cold Stroge) ಹಾಗೂ ನೀರಿನ ಬಾಟಲ್‌ಗಳನ್ನು ಮಾರುತ್ತಿರುವುದು ಕಂಡು ಬಂದಿರುತ್ತದೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಎಲ್.ಟಿ.ಎಮ್.ಆರ್ ಉಪ ವಿಭಾಗ ಧಾರವಾಡರವರ ವರದಿ ನಂ-21140 ದಿನಾಂಕ:13-12-2019 ರಂತೆ ಸಂಪರ್ಕಿತ ಭಾರ 0.480 ಕಿಲೋ ವ್ಯಾಟ್ ನೀರೀಕ್ಷಿಸಿದ್ದು, ಮಂಜೂರಾದ

....2

ಭಾರದೊಳಗೆ ದಾಖಲಾಗಿರುತ್ತದೆ. ಜುಲೈ-2019 ಎಮ್.ಡಿ-7.20 ಅಗಸ್ಟ-2019 ಎಮ್.ಡಿ-7.22 ಸೆಪ್ಟಂಬರ್-2019 ಎಮ್.ಡಿ-7.20 ರೇಕಾರ್ಡ ಆಗಿರುತ್ತದೆ ಮತ್ತು ಸ್ಥಾವರ ಸಂಖ್ಯೆ: 69920ಸಿ ಇವರ ವಿದ್ಯುತ್ ಮಾಪಕವು Meter Recording within permissible limits of Error ಹಾಗೂ Meter Found OK ಎಂದು ನಿರೀಕ್ಷಿಸಿ ವರದಿ ಸಲ್ಲಿಸಿರುತ್ತಾರೆ ಆದ್ದರಿಂದ ದಿನಾಂಕ:01-01-2020 ರಂದು ಸದರಿ ವಿದ್ಯುತ್ ಮಾಪಕದಲ್ಲಿ ದಾಖಲಾಗಿರುವ ಅಂತಿಮ ಗಣಾಂಕ 2568 ಇದ್ದು ಬಿಲ್ ಮೊತ್ತ 23935/- ಪ್ರಕಾರ ಸರಿ ಇರುತ್ತದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-1, ಹೆಸ್ಕಾಂ, ಧಾರವಾಡರವರು ದಿನಾಂಕ: 25-09-2020 ರಲ್ಲಿ ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

3. ಸದರ ಪ್ರಕರಣವನ್ನು ದಿನಾಂಕ:25-02-2020 ಮತ್ತು ದಿನಾಂಕ:25-09-2020 ರಂದು ವಿಚಾರಣೆಯನ್ನು ನಡೆಸಲಾಯಿತು. ಆಗ ಈ ಕೆಳಗಿನವರು ಹಾಜರಿದ್ದರು.

| ಗ್ರಾಹಕರ ಪ್ರತಿನಿಧಿ | ನಿಗಮದ ಪರವಾಗಿ |
|---|---|
| ಶ್ರೀ ಬಸವರಾಜ ಯ ಹೊಸಮನಿ | ಶ್ರೀ ಸಂತೋಷ ಬಿ ಕುಂದರ |
| ವಕೀಲರು | ಕಾ ಮತು ಪಾ ಶಹರ ಉಪವಿಭಾಗ-1, ಧಾರವಾಡ. |

**ಶ್ರೀ ಸಂತೋಷ ಪಿ ಹಣ್ಣಿಕೇರಿ, ಗ್ರಾಹಕರು, ಸಾ:ಧಾರವಾಡ ಇವರ (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ ಈ ಕೆಳಗಿನಂತಿರುತ್ತದೆ:**

ವಿಷಯ: ಭಾರಿ ಮೊತ್ತದ ವಿದ್ಯುತ್ ಬಿಲ್ ಬಂದಿರುವುದು R.R.No:69920C A/C I.D:1072700000 ನಾನು ಅರ್ಜಿದಾರ ಶ್ರೀ ಸಂಯೋಷ ಪಿ ಹಣ್ಣಿಕೇರಿ, ಹಾಲಿವಸ್ತಿ ಬೆಂಗಳೂರಿನಲ್ಲಿ ವಾಸಿಸುತ್ತಿದ್ದು, ಮೇಲ್ಕಾಣಿಸಿದ ವಿಳಾಸದಲ್ಲಿ ನನ್ನ ಸ್ವಂತದ ಮನೆ ಇರುತ್ತದೆ. ಮೇಲ್ಕಾಣಿಸಿದ ವಾಸದ ಮನೆಯ ಜೊತೆಗೆ ಒಂದು ಚಿಕ್ಕ ಅಂಗಡಿಯನ್ನು ಬಾಡಿಗೆಗೆ ಕೊಟ್ಟಿರುತ್ತೇನೆ. ಇಲ್ಲಿವರೆಗೆ ಅಂದರೆ ಜೂನ್-2019 ರಲ್ಲಿ ಹಳೆಯ ವಿದ್ಯುತ್ ಮೀಟರನ್ನು ತೆಗೆದು ಹೊಸ ಮೀಟರ್‌ನ್ನು ಹೆಸ್ಕಾಂ, ಅವರು ಅಳವಡಿಸಿ ಹೋಗಿರುತ್ತಾರೆ. ತದನಂತರ ಮೀಟರ್ ಬದಲಾಯಿಸುವಕ್ಕಿಂತ ಪೂರ್ವದಲ್ಲಿ ವಿದ್ಯುತ್ ಬಿಲ್ 250 ರಿಂದ 300/- ತಿಂಗಳಿಗೆ ಬರುತ್ತಿದ್ದು, ಹೊಸ ಮೀಟರ್ ಅಳವಡಿಕೆಯಿಂದಾಗಿ ವಿದ್ಯುತ್ ಬಿಲ್ 1680/- ಹಾಗೂ ಅಗಷ್ಟ, ಸಪ್ಟಂಬರ್ ಬಿಲ್ 19000/- ರೂಗಳವರೆಗೆ ಬಂದಿರುತ್ತದೆ. ಇದರಿಂದಾಗಿ ನಾವು ಸಾಕಷ್ಟು ಬಾರಿ ಹೆಸ್ಕಾಂ, ಕಚೇರಿ ಅಲೆದಾಡಿದಾಗ ನಮಗೆ ಈವರೆಗೂ ನ್ಯಾಯ ಸಿಕ್ಕಿಲ್ಲ ಇದಕ್ಕೆ ಸಂಬಂಧಿಸಿದ ಎಲ್ಲಾ ಪರೀಕ್ಷೆಗಳು ನಡೆದಿರುತ್ತದೆ. ಆದರೆ ಫಲಿತಾಂಶ ಶೂನ್ಯ ದಯಮಾಡಿ ನಮಗೆ ನ್ಯಾಯ ದೊರಕಿಸಿಕೊಡಿ.

**ನಿಗಮದ ಪರವಾಗಿ ಮಾಪಕ ಓದುಗ, ಶಾಖೆ-3, ಸತ್ತೂರ ಇವರ ಲಿಖಿತ ಹೇಳಿಕೆ:**

ನಾನು ಶ್ರೀ ವಿಠಲ ನಿಕ್ಕಂ, ಕಿರಿಯ ಪವರ್‌ಮ್ಯಾನ್,(ಮಾಪಕ ಓದುಗ ಸಂಖ್ಯೆ-21) ಶಾಖೆ-3, ಸತ್ತೂರ, ನಗರ ಉಪ ವಿಭಾಗ, ಹೆಸ್ಕಾಂ, ಡಿ ಎಫ್ ಲಂಗೋಟಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ನಗರ ಉಪ ವಿಭಾಗ-2, ಹೆಸ್ಕಾಂ, ಧಾರವಾಡ ದಿನಾಂಕ: 01-01-2020 ರಂದು ಸ್ಥಾವರ ಸಂಖ್ಯೆ 69920ಸಿ ಶ್ರೀ ಸಂತೋಷ ಪಿ ಹಣ್ಣಿಕೇರಿ ವನಶ್ರೀನ ನಗರ ಸತ್ತೂರರವರ ವಿದ್ಯುತ್ ಹೆಚ್ಚುವರಿ ಆಕರಣೆ ಆಗಿರುವ ಬಗ್ಗೆ ಹೇಳಿಕೆ ನೀಡುವುದೇನೆಂದರೆ,

ದಿನಾಂಕ: 13-12-2019 ರಂದು ಸದರಿ ಸ್ಥಾವರದ ವಿದ್ಯುತ್ ಮಾಪಕವನ್ನು ಎಮ್.ಆರ್.ಟಿ ಉಪ ವಿಭಾಗದವರು ಪರಿಶೀಲಿಸಿ ವರದಿ ಸಂಖ್ಯೆ 21140 ದಿನಾಂಕ:13-12-2019 ರ ಪ್ರಕಾರ ವಿದ್ಯುತ್ ಮಾಪಕವು ಸರಿ ಇರುತ್ತದೆ ಎಂದು ವರದಿಯನ್ನು ಸಲ್ಲಿಸಿರುವುದರಿಂದ ಮಾಪಕದಲ್ಲಿ ದಾಖಲಾಗಿರುವ ಅಂತಿಮ ಗುಣಾಂಕ ಪ್ರಕಾರ ಗ್ರಾಹಕರಿಗೆ ವಿದ್ಯುತ್ ಬಿಲ್‌ನ್ನು ನೀಡಿರುತ್ತೇನೆಂದು ಈ ಮಾಹಿತಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಿರುತ್ತೇನೆ.

.....3

## ನಿಗಮದ ಪರವಾಗಿ ಶಾಖಾಧಿಕಾರಿ, ಶಾಖೆ-3, ಸತ್ತೂರ ಇವರ ಲಿಖಿತ ಹೇಳಿಕೆ:

ನಾನು ಶ್ರೀ ಬಸವರಾಜ ಚವ್ಹಾನ ಶಾಖಾಧಿಕಾರಿಗಳು ಶಾಖೆ-3, ಸತ್ತೂರ ನಗರ ಉಪ ವಿಭಾಗ-3, ಹೆಸ್ಕಾಂ, ವಿದ್ಯಾಗಿರಿ ಧಾರವಾಡ ದಿನಾಂಕ:01-01-2020 ರಂದು ಸ್ಥಾವರ ಸಂಖ್ಯೆ: 69920ಸಿ ಶ್ರೀ ಸಂತೋಷ ಪಿ ಹಣ್ಣಿಕೇರಿ ವನಶ್ರೀ ನಗರ, ಸತ್ತೂರರವರ ವಿದ್ಯುತ್ ಬಿಲ್ಲು ಹೆಚ್ಚುವರಿ ಆಕರಣೆ ಆಗಿರುವ ಬಗ್ಗೆ ಹೇಳಿಕೆ ನೀಡುವುದೇನೆಂದರೆ,

ದಿನಾಂಕ:18-08-2019 ರಂದು ಶ್ರೀ ಸಂತೋಷ ಪಿ ಹಣ್ಣಿಕೇರಿರವರ ತಾಯಿಯವರು ಪ್ರಸ್ತುತ ತಿಂಗಳು ವಿದ್ಯುತ್ ಬಿಲ್ಲು ಹಚ್ಚಿಗೆ ಬಂದಿರುತ್ತದೆ ಎಂದು ವಿನಂತಿಸಕೊಂಡಾಗ ನಂತರ ಸದರಿ ಸ್ಥಾವರವನ್ನು ಪರಿಶೀಲಿಸಿದಾಗ ಈ ಸ್ಥಾವರವು ನೆಲ ಮಹಡಿಯಲ್ಲಿ ಬಳಕೆಗೆ ಉಪಯೋಗಿಸುತ್ತಿರುವುದು ಕಂಡು ಬಂದಿರುತ್ತದೆ. ಸದರಿ ವಾಣಿಜ್ಯ ಅಂಗಡಿಯಲ್ಲಿ ಒಂದು ಪ್ರೀಜ್(ಐಸ್‌ಕ್ರೀಂ ಸ್ಟೂರೇಜ್) & ಎರಡು ಎಲ್.ಇ.ಡಿ ಬಲ್ಬ ಒಟ್ಟು 0.5 ಕಿ.ವ್ಯಾ ವಿದ್ಯುತ್ ಭಾರವನ್ನು ಹೊಂದಿರುತ್ತದೆ. ಈ ಸ್ಥಾವರದ ಹಳೆಯ ಎಲೇಕ್ಟ್ರೋ ಮೇಕ್ಯಾನಿಕಲ್ ಮಾಪಕವನ್ನು ಐ.ಪಿಡಿ.ಎಸ್ ಯೋಜನೆಯಡಿಯಲ್ಲಿ ಹೊಸದಾಗಿ ಎಲೆಕ್ಟ್ರೋನ್ಸಿ 5.30 ಎ ಮಾಪಕವನ್ನು ದಿನಾಂಕ:17-07-2019 ರಂದು ಬದಲಾಯಿಸಿರುತ್ತೇವೆ ನಂತರ ಸದರಿ ಗ್ರಾಹಕರು ವಿದ್ಯುತ್ ಬಿಲ್ಲಿನ ಹೆಚ್ಚಿಗೆ ಬರುತ್ತಿದೆ ಎಂದು ವಿನಂತಿಸಿಕೊಂಡಾಗ ದಿನಾಂಕ:22-08-2019 ರಂದು ಮಾಪಕ ಪರೀಕ್ಷೆಗೆ ರೂ. 250 ಗಳನ್ನು ಸಂದಾಯಿಸಿಕೊಂಡು ಮಾಪಕ ಪರಿವೀಕ್ಷಕರು ನಗರ ಉಪ ವಿಭಾಗಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ನಂತರ ಸದರಿಯವರು ದಿನಾಂಕ:13-12-2019 ರಂದು ವರದಿ ಸಂಖ್ಯೆ:21140 ಪ್ರಕಾರ ಮಾಪಕವು ಸರಿ ಇರುತ್ತದೆ ಎಂದು ವರದಿಯನ್ನು ಸಲ್ಲಿಸಿರುತ್ತಾರೆ. ನಂತರ ದಿನಾಂಕ:01-1-2020 ರಂದು ಎಮ್ ಆರ್. ಟಿ ರವರ ವರದಿ ಬಂದ ನಂತರ ಸದರಿ ಸ್ಥಾವರಕ್ಕೆ ವಿದ್ಯುತ್ ಬಿಲ್ಲನ್ನು ನೀಡಿರುತ್ತೇವೆ ಮತ್ತು ಮೇಲೆ ತಿಳಿಸಿದ ವಿಷಯವನ್ನು ಪರಿಶೀಲಿಸಿ ನಂತರ ಸದರಿ ವಿದ್ಯುತ್ ಮಾಪಕವು ಸರಿ ಇರಬಹುದು ಹಾಗೂ ಗ್ರಾಹಕರ ವಿದ್ಯುತ್‌ನ್ನು ಉಪಯೋಗಿಸಿರಬಹುದು ಎಂದು ಅಭಿಪ್ರಾಯ ಪಡೆಯಲಾಗಿದೆ.

## ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಕಾ ಮತ್ತು ಪಾ ಶಹರ ಉಪವಿಭಾಗ-1, ಹೆಸ್ಕಾಂ, ಧಾರವಾಡರವರು ಪತ್ರ ಸಂಖ್ಯೆ:9306-07 ದಿನಾಂಕ:21-03-2020 ರ ಪತ್ರದೊಂದಿಗೆ ಸಲ್ಲಿಸಿರುವ ಹೇಳಿಕೆಯನ್ನು ಮುಂದುವರೆದ ಲಿಖಿತ ಹೇಳಿಕೆಯನ್ನಾಗಿ ಪರಿಗಣಿಸುವಂತೆ ವಿನಂತಿಸಿಕೊಂಡಿರುತ್ತಾರೆ. ಸಾರಾಂಶ ಕೆಳಗಿನಂತಿರುತ್ತದೆ.

ಸ್ಥಾವರ ಸಂಖ್ಯೆ: 69920c ಶ್ರೀ ಸಂತೋಷ ಪಿ ಹನ್ನಿಕೇರಿ, ನಂ-779 "ಪದ್ಮಾವತಿ ನಿಲಯ" ವನಶ್ರೀ ನಗರ ಸತ್ತೂರ ಧಾರವಾಡ-580009 ಮೋಬೈಲ್ ಸಂಖ್ಯೆ: 99166675550 ಗ್ರಾಹಕರು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯಲ್ಲಿ ಈ ಕಚೇರಿಯ ವಿರುದ್ಧ ಸ್ಥಾವರ ಸಂಖ್ಯೆ 69920ಸಿ ಯ ಜನೇವರಿ ಮಾಹೆಯ ಬಿಲ್‌ನ ಮೊತ್ತ ರೂ. 23935/- ಬಂದಿರುವುದಕ್ಕೆ ದೂರನ್ನು ದಾಖಲಿಸಿ ವಿಚಾರಣೆಗಾಗಿ ವಿನಂತಿಸಿರುತ್ತಾರೆ ಎಂದು ತಾವು ತಿಳಿಸಿರುತ್ತೀರಿ. ದಿನಾಂಕ:25-02-2020 ರಂದು ಧಾರವಾಡ ಜಿಲ್ಲೆಯ ಗ್ರಾಹಕರ ಕುಂದು ನಿವಾರಣಾ ವೇದಿಕೆ ಹೆಸ್ಕಾಂ, ಹುಬ್ಬಳ್ಳಿಯಲ್ಲಿ ಜರುಗಿದ ಸಭೆಯ ನಡಾವಳಿಯಂತೆ ತಾವು ತಿಳಿಸಿದ ಹಾಗೆ ಸದರಿ ಸ್ಥಾವರದ ಆರ್ & ಆರ್ ವರದಿ ಮಾಪಕ ಓದುಗ ಹೇಳಿಕೆ ಶಾಖಾಧಿಕಾರಿಯವ ಸ್ಥಳ ಪರಿಶೀಲನಾ ವರದಿ, ಹಾಗೂ ಎಲ್.ಟಿ.ಎಮ್.ಆರ್ ಉಪ ವಿಭಾಗದಿಂದ ಹೊಸ ಮೀಟರ್ ಡೌನಲೋಡ ಡಾಟಾ ಹಾಗೂ ಗ್ರಾಹಕರಿಗೆ ನೀಡಿರುವ ಬಿಲ್‌ನ ಪೂರ್ಣ ವಿವರಗಳ ವರದಿಯನ್ನು ಈ ಪತ್ರದ ಜೊತೆಗೆ ಲಗತ್ತಿಸಲಾಗಿದ್ದು ದಯಾಪರರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

**<u>ಹೇಳಿಕೆ:</u>** ಸ್ಥಾವರ ಸಂಖ್ಯೆ: 69920ಸಿ ಶ್ರೀ ಸಂತೋಷ ಪಿ ಹನ್ನಿಕೇರಿ ನಂ-779 'ಪದ್ಮಾವತಿ ನಿಲಯ' ವನಶ್ರೀ ನಗರ ಸತ್ತೂರ ಧಾರವಾಡ, ಸ್ಥಾವರವು ಎಲ್.ಟಿ-3 ಜಕಾತಿ ಅಡಿಯಲ್ಲಿ 0.480 ಕಿಲೋ ವ್ಯಾಟ್ ಭಾರಕ್ಕಾಗಿ ಮಂಜೂರಾತಿ ಪಡೆದಿದ್ದು ದಿನಾಂಕ:30-03-2007 ರಂದು ಸಂಪರ್ಕಗೊಂಡಿರುತ್ತದೆ. ಸದರಿ ಸ್ಥಾವರಕ್ಕೆ ಸಂಬಂಧಪಟ್ಟಂತೆ ಈ ಕೆಳಗಿನಂತೆ ಕ್ರಮ ಜರುಗಿಸಲಾಗಿದೆ.

1) ಸದರಿ ಆರ್ ಆರ್ ನಂ-69920ಸಿ ಸ್ಥಾವರವನ್ನು ಸಹಾಯಕ ಇಂಜಿನೀಯರ(ವಿ), ಎಲ್.ಟಿ.ಎಮ್.ಆರ್ ಉಪ ವಿಭಾಗ ಧಾರವಾಡರವರ ರೇಟಿಂಗ್ ವರದಿ ನಂ:9845 ದಿನಾಂಕ:27-08-2019 ನಿರೀಕ್ಷಿಸಿರುವಂತೆ ಮಾಪಕವು ಸರಿ ಇದೆ ಎಂದು ಹಾಗೂ ಎಮ್.ಡಿ-7.22 ಇದೆ ಎಂದು ವರದಿ ನೀಡಿರುತ್ತಾರೆ.

.....4

2) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಎಲ್.ಟಿ.ಎಮ್.ಆರ್ ಉಪ ವಿಭಾಗ ಧಾರವಾಡರವರ ವರದಿ ನಂ-21140 ದಿನಾಂಕ:13-12-2019 ರಂತೆ ಸಂಪರ್ಕಿತ ಭಾರ 0.480 ಕಿಲೋ ವ್ಯಾಟ್ ನೀರೀಕ್ಷಿಸಿದ್ದು, ಮಂಜೂರಾದ ಭಾರದೊಳಗೆ ದಾಖಲಾಗಿರುತ್ತದೆ. ಜುಲೈ-2019 ಎಮ್.ಡಿ-7.20, ಅಗಷ್ಟ-2019 ಎಮ್.ಡಿ-7.22, ಸೆಪ್ಟಂಬರ್-2019 ಎಮ್.ಡಿ-7.20 ರಿಕಾರ್ಡ ಆಗಿರುತ್ತದೆ. ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಎಲ್.ಟಿ.ಎಮ್.ಆರ್. ಉಪ ವಿಭಾಗ ಧಾರವಾಡರವರ ಪತ್ರದ ಸಂಖ್ಯೆ:456-59 ದಿನಾಂಕ:24-12-2019 ರಂತೆ ತಿಳಿಸಿರುತ್ತಾರೆ.
3) ವಿದ್ಯುತ್ ಮಾಪಕವು ಐ.ಪಿ.ಡಿ.ಎಸ್. ಯೋಜನೆಯಡಿ ದಿನಾಂಕ:17-07-2019 ರಂದು ಬದಲಾಯಿಸಲಾಗಿರುತ್ತದೆ.
4) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಎಲ್.ಟಿ.ಎಮ್.ಆರ್ ಉಪ ವಿಭಾಗ, ಧಾರವಾಡರವರ ವರದಿ ನಂ-21140 ದಿನಾಂಕ:13-12-2019. ರಂದು ನಿರೀಕ್ಷಿಸಿದಂತೆ ಸ್ಥಾವರ ಸಂಖ್ಯೆ: 69920ಸಿ ಇವರ ವಿದ್ಯುತ್ ಮಾಪಕವು Meter Recording within permissible limits of Error ಹಾಗೂ Meter Found OK ಎಂದು ನಿರೀಕ್ಷಿಸಿ ವರದಿ ಸಲ್ಲಿಸಿರುತ್ತಾರೆ.
5) ಶಾಖಾಧಿಕಾರಿ ಸತ್ತೂರವರ ವಿವರವಾದ ಪಂಚನಾಮ ವರದಿಯಂತೆ ಮಾಪಕವು ಸರಿಯಾಗಿದ್ದು ಹಾಗೂ ಗ್ರಾಹಕರು ವಿದ್ಯುತ್‌ನ್ನು ಉಪಯೋಗಿಸಿರುತ್ತಾರೆಂದು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ ಹಾಗೂ ನೀಡಿರುವ ಬಿಲ್ ಮೊತ್ತವನ್ನು ತುಂಬಬೇಕೆಂದು ತಿಳಿಸಿರುತ್ತಾರೆ.
6) ಮಾಪಕ ಓದುಗ 21 ಸತ್ತೂರ ಶಾಖೆ-3ರವರ ಹೇಳಿಕೆಯಂತೆ ಸ್ಥಳದಲ್ಲಿ ಗ್ರಾಹಕರು ವಿದ್ಯುತ್‌ನ್ನು ಉಪಯೋಸಿರುತ್ತಾರೆ. ಹಾಗೂ ದಿನಾಂಕ:01-01-2020 ರಂದು ಸದರಿ ವಿದ್ಯುತ್ ಮಾಪಕದಲ್ಲಿ ದಾಖಲಾಗಿರುವ ಅಂತಿಮ ಗಣಾಂಕ 2568 ಇದ್ದು ಬಿಲ್ ಮೊತ್ತ 23935/- ಪ್ರಕಾರ ಸರಿ ಇರುತ್ತದೆ ಎಂದು ತಮ್ಮ ಹೇಳಿಕೆಯನ್ನು ದಾಖಲಿಸಿರುತ್ತಾರೆ.

ಮೇಲಿನ ಎಲ್ಲ ವರದಿ ಹಾಗೂ ಹೇಳಿಕೆಯನ್ನಾಧರಿಸಿ ವಿದ್ಯುತ್ ಮಾಪಕವು ಸರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತದೆ ಹಾಗೂ ಗ್ರಾಹಕರು ಸದರಿ ಮೊತ್ತ ರೂ. 23935/- ನ್ನು ತುಂಬಬೇಕಾಗುತ್ತದೆ. ಈ ಮೂಲಕ ತಿಳಿಸಲಾಗಿದೆ ಸದರಿ ರೇಟಿಂಗ್ ವರದಿಯ ಪ್ರತಿ ಶಾಖಾಧಿಕಾರಿಗಳ ಸ್ಥಳ ಪರಿಶೀಲನಾ ವರದಿ, ಮಾಪಕ ಓದುಗರ ಹೇಳಿಕೆ ಹಾಗೂ ಸದರಿ ಸ್ಥಾವರ ಸ್ಥಳದ ಛಾಯಾಚಿತ್ರಗಳ ಪ್ರತಿಯನ್ನು ತಮ್ಮ ದಯಾಪರ ಅವಗಾಹಣೆಗಾಗಿ ಲಗತ್ತಿಸಿದೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

**<u>ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಕಾ ಮತ್ತು ಪಾ ಶಹರ ಉಪವಿಭಾಗ-1, ಹೆಸ್ಕಾಂ, ಧಾರವಾಡರವರು ಪತ್ರ ಸಂಖ್ಯೆ:3306-09 ದಿನಾಂಕ:22-09-2020 ರ ಪತ್ರದೊಂದಿಗೆ ಸಲ್ಲಿಸಿರುವ ಹೇಳಿಕೆಯನ್ನು ಮುಂದುವರೆದ ಲಿಖಿತ ಹೇಳಿಕೆಯನ್ನಾಗಿ ಪರಿಗಣಿಸುವಂತೆ ವಿನಂತಿಸಿಕೊಂಡಿರುತ್ತಾರೆ ಸಾರಾಂಶ ಕೆಳಗಿನಂತಿರುತ್ತದೆ.</u>**

ಸ್ಥಾವರ ಸಂಖ್ಯೆ: 69920c ಶ್ರೀ ಸಂತೋಷ ಪಿ ಹನ್ನಿಕೇರಿ, ನಂ-779 "ಪದ್ಮಾವತಿ ನಿಲಯ" ವನಶ್ರೀ ನಗರ ಸತ್ತೂರ ಧಾರವಾಡ-580009 ಮೋಬೈಲ್ ಸಂಖ್ಯೆ: 99166675550 ಗ್ರಾಹಕರು, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯಲ್ಲಿ ಈ ಕಚೇರಿಯ ವಿರುದ್ಧ ಸ್ಥಾವರ ಸಂಖ್ಯೆ 69920ಸಿ ಯ ಜನೇವರಿ ಮಾಹೆಯ ಬಿಲ್‌ನ ಮೊತ್ತ ರೂ. 23935/- ಬಂದಿರುವುದಕ್ಕೆ ದೂರನ್ನು ದಾಖಲಿಸಿ ವಿಚಾರಣೆಗಾಗಿ ವಿನಂತಿಸಿರುತ್ತಾರೆ ಎಂದು ತಾವು ತಿಳಿಸಿರುತ್ತೀರಿ. ದಿನಾಂಕ:25-02-2020 ರಂದು ಧಾರವಾಡ ಜಿಲ್ಲೆಯ ಗ್ರಾಹಕರ ಕುಂದು ನಿವಾರಣಾ ವೇದಿಕೆ ಹೆಸ್ಕಾಂ, ಹುಬ್ಬಳ್ಳಿಯಲ್ಲಿ ಜರುಗಿದ ಸಭೆಯ ನಡಾವಳಿಯಂತೆ ತಾವು ತಿಳಿಸಿದ ಹಾಗೆ ಸದರಿ ಸ್ಥಾವರದ ಆರ್ & ಆರ್ ವರದಿ ಮಾಪಕ ಓದುಗ ಹೇಳಿಕೆ ಶಾಖಾಧಿಕಾರಿಯವ ಸ್ಥಳ ಪರಿಶೀಲನಾ ವರದಿ, ಹಾಗೂ ಎಲ್.ಟಿ.ಎಮ್.ಆರ್ ಉಪ ವಿಭಾಗದಿಂದ ಹೊಸ ಮೀಟರ್ ಡೌನಲೋಡ ಡಾಟಾ ಹಾಗೂ ಗ್ರಾಹಕರಿಗೆ ನೀಡಿರುವ ಬಿಲ್‌ನ ಪೂರ್ಣ ವಿವರಗಳ ವರದಿಯನ್ನು ಈ ಪತ್ರದ ಜೊತೆಗೆ ಲಗತ್ತಿಸಲಾಗಿದ್ದು ದಯಾಪರರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

**<u>ಹೇಳಿಕೆ:</u>** ಸ್ಥಾವರ ಸಂಖ್ಯೆ: 69920ಸಿ ಶ್ರೀ ಸಂತೋಷ ಪಿ ಹನ್ನಿಕೇರಿ ನಂ-779 'ಪದ್ಮಾವತಿ ನಿಲಯ' ವನಶ್ರೀ ನಗರ ಸತ್ತೂರ ಧಾರವಾಡ, ಸ್ಥಾವರವು ಎಲ್.ಟಿ-3 ಜಕಾತಿ ಅಡಿಯಲ್ಲಿ 0.480 ಕಿಲೋ ವ್ಯಾಟ್ ಭಾರಕ್ಕಾಗಿ ಮಂಜೂರಾತಿ ಪಡೆದಿದ್ದು ದಿನಾಂಕ:30-03-2007 ರಂದು ಸಂಪರ್ಕಗೊಂಡಿರುತ್ತದೆ. ಸದರಿ ಸ್ಥಾವರಕ್ಕೆ ಸಂಬಂಧಪಟ್ಟಂತೆ ಈ ಕೆಳಗಿನಂತೆ ಕ್ರಮ ಜರುಗಿಸಲಾಗಿದೆ.

.....5

1) ಮಾಪಕ ಓದುಗ 21 ಸತ್ತೂರ ಶಾಖೆ-3ರವರ ಹೇಳಿರುವಂತೆ ಸ್ಥಳದಲ್ಲಿ ಗ್ರಾಹಕರು ವಿದ್ಯುತ್ ಉಪಕರಣಗಳಾದ ಫ್ರೀಜ್ (Ice Cream cold Stroge) ಹಾಗೂ ನೀರಿನ ಬಾಟಲ್‌ಗಳನ್ನು ಮಾರುತ್ತಿರುವುದು ಕಂಡು ಬಂದಿರುತ್ತದೆ. ಹಾಗೂ ಸ್ಥಾವರದ ಮಾಪನಾಂಕ ಸರಿಯಾಗಿರುತ್ತದೆ ಎಂದು ಹೇಳಿಕೆ ದಾಖಲಿಸಿರುತ್ತಾರೆ.
2) ಶಾಖಾಧಿಕಾರಿ ಸತ್ತೂರವರು ವಿವರವಾದ ಪಂಚನಾಮೆ ವರದಿಯನ್ನು ಸಲ್ಲಿಸಿದ್ದು, ತಮ್ಮ ಮಾಪಕ ಓದುಗರವರು ನೀಡಿರುವ ಹೇಳಿಕೆಯನ್ನಾಧರಿಸಿ ಸ್ಥಳದಲ್ಲಿ ಗ್ರಾಹಕರು ವಿದ್ಯುತ್ ಉಪಯೋಗಿಸಿರುವುದು ಸರಿಯಾಗಿರುತ್ತದೆ. ಎಂದು ತಮ್ಮ ಹೇಳಿಕೆಯನ್ನು ದಾಖಲಿಸಿರುತ್ತಾರೆ. ಹಾಗೂ ಗ್ರಾಹಕರು ಬಿಲ್ಲನ್ನು ತುಂಬಬೇಕಾಗುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ.
3) ಸದರಿ ಆರ್ ಆರ್ ನಂ-69920ಸಿ ಸ್ಥಾವರವನ್ನು ಸಹಾಯಕ ಇಂಜಿನೀಯರ(ವಿ), ಎಲ್.ಟಿ.ಎಮ್.ಆರ್ ಉಪ ವಿಭಾಗ ಧಾರವಾಡರವರ ರೇಟಿಂಗ್ ವರದಿ ನ:9845 ದಿನಾಂಕ:27-08-2019 ನಿರೀಕ್ಷಿಸಿರುವಂತೆ ಮಾಪಕವು ಸರಿ ಇದೆ ಎಂದು ಹಾಗೂ ಎಮ್.ಡಿ-7.22 ಇದೆ ಎಂದು ವರದಿ ನೀಡಿರುತ್ತಾರೆ.
4) ಸಹಾಯಕ ಕಾರ್ಯನಿರ್ವಾಹಕ ಇಂಇನೀಯರ(ವಿ) ಎಲ್.ಟಿ.ಎಮ್.ಆರ್ ಉಪ ವಿಭಾಗ ಧಾರವಾಡರವರ ವರದಿ ನಂ-21140 ದಿನಾಂಕ:13-12-2019 ರಂತೆ ಸಂಪರ್ಕಿತ ಭಾರ 0.480 ಕಿಲೋ ವ್ಯಾಟ್ ನೀರೀಕ್ಷಿಸಿದ್ದು, ಮಂಜೂರಾದ ಭಾರದೊಳಗೆ ದಾಖಲಾಗಿರುತ್ತದೆ. ಜುಲೈ-2019 ಎಮ್.ಡಿ-7.20 ಅಗಷ್ಟ-2019 ಎಮ್.ಡಿ-7.22 ಸೆಪ್ಟಂಬರ್-2019 ಎಮ್.ಡಿ-7.20 ರೇಕಾರ್ಡ ಆಗಿರುತ್ತದೆ. ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಎಲ್.ಟಿ.ಎಮ್.ಆರ್. ಉಪ ವಿಭಾಗ ಧಾರವಾಡರವರ ಪತ್ರದ ಸಂಖ್ಯೆ:456-59 ದಿನಾಂಕ:24-12-2019 ರಂತೆ ತಿಳಿಸಿರುತ್ತಾರೆ.
5) ವಿದ್ಯುತ್ ಮಾಪಕವು ಐ.ಪಿ.ಡಿ.ಎಸ್. ಯೋಜನೆಯಡಿ ದಿನಾಂಕ:17-07-2019 ರಂದು ಬದಲಾಯಿಸಲಾಗಿರುತ್ತದೆ.
6) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಎಲ್.ಟಿ.ಎಮ್.ಆರ್ ಉಪ ವಿಭಾಗ, ಧಾರವಾಡರವರ ವರದಿ ನಂ-21140 ದಿನಾಂಕ:13-12-2019. ರಂದು ನಿರೀಕ್ಷಿಸಿದಂತೆ ಸ್ಥಾವರ ಸಂಖ್ಯೆ: 69920ಸಿ ಇದರ ವಿದ್ಯುತ್ ಮಾಪಕವು Meter Recording within permissible limits of Error ಹಾಗೂ Meter Found OK ಎಂದು ನಿರೀಕ್ಷಿಸಿ ವರದಿ ಸಲ್ಲಿಸಿರುತ್ತಾರೆ.

ಈ ಮೇಲಿನ ಮಾಪಕ ಓದುಗರವರ ಹೇಳಿಕೆ ಶಾಖಾಧಿಕಾರಿಯವರ ಹೇಳಿಕೆ ಹಾಗೂ ಎಲ್.ಟಿ.ಎಮ್.ಆರ್ ವರದಿಯನ್ನಾಧರಿಸಿ ವಿದ್ಯುತ್ ಮಾಪಕವು ಸರಿಯಾಗಿದ್ದು, ಗ್ರಾಹಕರಿಗೆ ನೀಡಿರುವ ಬಿಲ್ ಹಾಗೂ ಮಾಪಕ ಗಣಾಂಕ ಸರಿಯಾಗಿರುತ್ತದೆ. ಎಂದು ಹಾಗೂ ಗ್ರಾಹಕರು ಸದರಿ ಬಿಲ್‌ನ ಮೊತ್ತವನ್ನು ತುಂಬಿಕೊಂಡು ಹೆಸ್ಕಾಂನೊಂದಿಗೆ ಸಹಕರಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

**ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:**

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಶ್ರೀ ಸಂತೋಷ ಪಿ ಹನ್ನಿಕೇರಿ, ಇವರ ಸ್ಥಾವರ ಸಂಖ್ಯೆ: 69920c ನೇದ್ದ ಸ್ಥಾವರವು 0.480 ಕಿಲೋ ವ್ಯಾಟ್ ವಿದ್ಯುತ್ ಮಂಜೂರಾತಿಯೊಂದಿಗೆ ಎಲ್.ಟಿ-3 ಜಕಾತಿಯಡಿಯಲ್ಲಿ ದಿನಾಂಕ:30-03-2007 ರಂದು ಸಂಪರ್ಕಿತಗೊಂಡಿರುತ್ತದೆ. ಸದರಿ ಗ್ರಾಹಕರ ವಾಸದ ಮನೆಯ ಜೊತೆಗೆ ಒಂದು ಚಿಕ್ಕ ಅಂಗಡಿಯನ್ನು ಬಾಡಿಗೆಗೆ ಕೊಟ್ಟಿದ್ದು, ಸದರಿ ಅಂಗಡಿಯ ಬಿಲ್ಲು ಇಲ್ಲಿವರೆಗೆ ಅಂದರೆ ಜೂನ್-2019 ರಲ್ಲಿ ಹಳೆಯ ವಿದ್ಯುತ್ ಮೀಟರನ್ನು ತೆಗೆದು ಹೊಸ ಮೀಟರ್‌ನ್ನು ಹೆಸ್ಕಾಂ, ಅವರು ಅಳವಡಿಸಿ ಹೋಗಿರುತ್ತಾರೆ. ತದನಂತರ ಮೀಟರ್ ಬದಲಾಯಿಸುವಕ್ಕಿಂತ ಪೂರ್ವದಲ್ಲಿ ವಿದ್ಯುತ್ ಬಿಲ್ 250 ರಿಂದ 300/- ತಿಂಗಳಿಗೆ ಬರುತ್ತಿದ್ದು, ಹೊಸ ಮೀಟರ್ ಅಳವಡಿಕೆಯಿಂದಾಗಿ ವಿದ್ಯುತ್ ಬಿಲ್ 1680/- ಹಾಗೂ ಅಗಷ್ಟ-2019, ಸಪ್ಟಂಬರ್-2019 ಬಿಲ್ ರೂ. 19000/-ಗಳವರೆಗೆ ಬಂದಿರುತ್ತದೆ. ಆದ್ದರಿಂದ ಸದರಿ ಮೊತ್ತವನ್ನು ಕೈ ಬಿಡುವಂತೆ ಕೋರಿ ಗ್ರಾಹಕರು ದಿನಾಂಕ:22-01-2020 ರಂದು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕಗೆ ದೂರು ಸಲ್ಲಿಸಿರುವುದು ಕಂಡು ಬರುತ್ತದೆ.
2. ಸ್ಥಾವರ ಸಂಖ್ಯೆ: 69920ಸಿ ಶ್ರೀ ಸಂತೋಷ ಪಿ ಹನ್ನಿಕೇರಿ ನಂ-779 'ಪದ್ಮಾವತಿ ನಿಲಯ' ವನಶ್ರೀ ನಗರ ಸತ್ತೂರ ಧಾರವಾಡ, ಸ್ಥಾವರವು ಎಲ್.ಟಿ-3 ಜಕಾತಿ ಅಡಿಯಲ್ಲಿ 0.480 ಕಿಲೋ ವ್ಯಾಟ್ ಭಾರಕ್ಕಾಗಿ ಮಂಜೂರಾತಿ ಪಡೆದಿದ್ದು ದಿನಾಂಕ:30-03-2007 ರಂದು ಸಂಪರ್ಕಗೊಂಡಿರುತ್ತದೆ. ಆವರಣದಲ್ಲಿ ....6

ಗ್ರಾಹಕರು ವಿದ್ಯುತ್ ಉಪಕರಣಗಳಾದ ಫ್ರೀಜ್ (Ice Cream cold Stroge) ಹಾಗೂ ನೀರಿನ ಬಾಟಲ್‌ಗಳನ್ನು ಮಾರುತ್ತಿರುವುದು ಕಂಡು ಬಂದಿರುತ್ತದೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಎಲ್.ಟಿ.ಎಮ್.ಆರ್ ಉಪ ವಿಭಾಗ ಧಾರವಾಡರವರ ವರದಿ ನಂ-21140 ದಿನಾಂಕ:13-12-2019 ರಂತೆ ಸಂಪರ್ಕಿತ ಭಾರ 0.480 ಕಿಲೋ ವ್ಯಾಟ್ ನೀರೀಕ್ಷಿಸಿದ್ದು, ಮಂಜೂರಾದ ಭಾರದೊಳಗೆ ದಾಖಲಾಗಿರುತ್ತದೆ. ಜುಲೈ-2019 ಎಮ್.ಡಿ-7.20 ಕಿ.ವ್ಯಾ, ಅಗಷ್ಟ-2019 ಎಮ್.ಡಿ-7.22 ಕಿ.ವ್ಯಾ ಮತ್ತು ಸೆಪ್ಟಂಬರ್-2019 ಎಮ್.ಡಿ-7.20 ಕಿ.ವ್ಯಾ ರೇಕಾರ್ಡ ಆಗಿರುತ್ತದೆ ಮತ್ತು ಸ್ಥಾವರ ಸಂಖ್ಯೆ: 69920ಸಿ ಇವರ ವಿದ್ಯುತ್ ಮಾಪಕವು Meter Recording within permissible limits of Error ಹಾಗೂ Meter Found OK ಎಂದು ಪರೀಕ್ಷಿಸಿ ವರದಿ ಸಲ್ಲಿಸಿರುತ್ತಾರೆ ಆದ್ದರಿಂದ ದಿನಾಂಕ:01-01-2020 ರಂದು ಸದರಿ ವಿದ್ಯುತ್ ಮಾಪಕದಲ್ಲಿ ದಾಖಲಾಗಿರುವ ಅಂತಿಮ ಗಣಾಂಕ 2568 ಇದ್ದು ಬಿಲ್ ಮೊತ್ತ 23935/- (3 ತಿಂಗಳು 18 ದಿನಗಳು ದಿ:17-07-2019 ರಿಂದ 01-01-2020 ರವರೆಗೆ) ಪ್ರಕಾರ ಸರಿ ಇರುತ್ತದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-1, ಹೆಸ್ಕಾಂ, ಧಾರವಾಡರವರು ದಿನಾಂಕ:25-09-2020 ರಲ್ಲಿ ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡುಬಂದಿರುತ್ತದೆ.

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ, ಸ್ಥಾವರ ಸಂಖ್ಯೆ: 69920ಸಿ ಶ್ರೀ ಸಂತೋಷ ಪಿ ಹನ್ನಿಕೇರಿ ಎಲ್.ಟಿ-3 ಜಕಾತಿ ಅಡಿಯಲ್ಲಿ ಸಂಪರ್ಕಗೊಂಡಿರುತ್ತದೆ ಎಲ್.ಟಿ.ಎಮ್.ಆರ್, ಹೆಸ್ಕಾಂ, ಧಾರವಾಡರವರ ವರದಿಯನುಸಾರ ಜುಲೈ-2019 ಎಮ್.ಡಿ-7.20 ಕಿ.ವ್ಯಾ, ಅಗಷ್ಟ-2019 ಎಮ್.ಡಿ-7.22 ಕಿ.ವ್ಯಾ ಮತ್ತು ಸೆಪ್ಟಂಬರ್-2019 ಎಮ್.ಡಿ-7.20 ಕಿ.ವ್ಯಾ ರೇಕಾರ್ಡ ಆಗಿರುತ್ತದೆ ಮತ್ತು ಸ್ಥಾವರ ಸಂಖ್ಯೆ: 69920ಸಿ ಇವರ ವಿದ್ಯುತ್ ಮಾಪಕವು Meter Recording within permissible limits of Error ಹಾಗೂ Meter Found OK ಎಂದು ಪರೀಕ್ಷಿಸಿ ನೀಡಿರುವ ವರದಿಯನುಸಾರ ಆವರಣದಲ್ಲಿ ಗ್ರಾಹಕರು ವಿದ್ಯುತ್ ಉಪಕರಣಗಳಾದ ಫ್ರೀಜ್ (Ice Cream cold Stroge) ಬಳಸಿಕೊಂಡು ನೀರಿನ ಬಾಟಲ್‌ಗಳನ್ನು ಮಾರುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ದಿನಾಂಕ:01-01-2020 ರಂದು ಸದರಿ ವಿದ್ಯುತ್ ಮಾಪಕದಲ್ಲಿ ದಾಖಲಾಗಿರುವ ಅಂತಿಮ ಗಣಾಂಕ 2568 ದಾಖಲಾಗಿದ್ದು, ಗ್ರಾಹಕರು ವಿದ್ಯುತ್‌ನ್ನು ಉಪಯೋಸಿಕೊಂಡಿರುವುದರಿಂದ ಬಿಲ್ ಮೊತ್ತ 23935/-ನ್ನು ಗ್ರಾಹಕರು ಕಂಪನಿಗೆ ಪಾವತಿಸಬೇಕಾಗುತ್ತದೆ. ಆದ್ದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-248/2020/CYS-591 ದಿನಾಂಕ:30-09-2020**

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ಸಿವೈಎಸ್-769 ದಿ.16.07.2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/19-20/ಸಿವೈಎಸ್-5493 ದಿ.12.03.2020 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಪುರಸ್ಕರಿಸಲಾಗಿಲ್ಲ.
2. ಸಹಾಯಕ ಕಾರ್ಯಾನಿರ್ವಾಹಕ ಇಂಜಿನೀಯರ(ವಿ)ರವರು ಗ್ರಾಹಕರ ಬಿಲ್ ಮೊತ್ತ ರೂ. 23935/-ಗಳನ್ನು ಕಂಪನಿಗೆ ನಿಯಮಾನುಸಾರ ಗ್ರಾಹಕರಿಂದ ಪಾವತಿಸಕೊಳ್ಳುವ ಕ್ರಮ ಜರುಗಿಸುವುದು.

(ರಾಮಪ್ಪ ಎನ್ ಎನ್)
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾಕುಂಕೊನಿವೇ ಸದಸ್ಯರು
ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ

(ಎಮ್. ಆರ್. ಶಾನಭಾಗ)
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ
ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ
ಗ್ರಾ.ಕುಂ.ಕೊ.ನಿ.ವೇದಿಕೆ.

ಗೆ,

**"ನೊಂದಾಯಿತ ಅಂಚೆ ಮೂಲಕ"**

**ಶ್ರೀ ಸಂತೋಷ ಪಿ ಹನ್ನಿಕೇರಿ,**
(R R No : 69920C)
ಮನೆ ನಂ-779 ಪದ್ಮಾವತಿ ನಿಲಯ,
ವನಶ್ರೀ ನಗರ ಸತ್ತೂರ ಧಾರವಾಡ-580009.

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.

......7

2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ನಗರ ವಿಭಾಗ, ಹುವಿಸಕಂನಿ., ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-1, ಹುವಿಸಕಂನಿ., ಧಾರವಾಡರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಹಾ ಕಡತ